[ Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 536/2024**

ಪಿಡ್ಲ್ಯೂಃ 7 ಸಿಡ್ಲ್ಯೂಃ 7

ಸಾಕ್ಷಿದಾರನ ಹೆಸರು : ಚಿಂಗ

ತಂದೆಯ ಹೆಸರು : ನಾಯಿ ಅಂಚನ್

ಪ್ರಾಯ : 58 ವರ್ಷ

ಉದ್ಯೋಗ : ಗ್ರಾಮ ಪಂಚಾಯತ್ ನ ಬಿಲ್ ಕಲೆಕ್ಟರ್

ವಾಸ : ಮುಡಾರು

ದಿನಾಂಕ 30.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ನೋಡಿರುವುದಿಲ್ಲ.

ಸುಮಾರು 2 ವರ್ಷದ ಹಿಂದೆ ನಾನು ಮಾಳ ಗ್ರಾಮಪಂಚಾಯತ್ ನಿಂದ ಬಜಗೋಳಿಗೆ ಹೋಗುವಾಗ ಶಾಲ ಮಕ್ಕಳ ಪ್ರವಾಸ ಬಸ್ಸು ಮಾಳ ಗ್ರಾಮದ ಕೂಡಬೆಟ್ಟು ಎಂಬ ತಿರುವಿನಲ್ಲಿ ಒಂದು ಮರಕ್ಕೆ ಢಿಕ್ಕಿ ಹೊಡೆದಿರುತ್ತದೆ. ಅಲ್ಲಿದ್ದ ಜನರು ಅತೀವೇಗದಿಂದ ಬಂದ ಬಸ್ಸು ಢಿಕ್ಕಿಹೊಡೆದಿರುತ್ತದೆ ಎಂದು ಮಾತನಾಡುತ್ತಿದ್ದರು. ಢಿಕ್ಕಿಪಡಿಸಿದ ಪರಿಣಾಮ ಬಸ್ಸಿನಲ್ಲಿದ್ದ 3 ಮಕ್ಕಳಿಗೆ ಗಾಯವಾಗಿರುತ್ತದೆ. ಆ ಮಕ್ಕಳನ್ನು ಅವರ ಶಾಲಾ ಶಿಕ್ಷಕರು ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ಘಟನೆಗೆ ಏನು ಕಾರಣ ಎಂದು ನನಗೆ ಗೊತ್ತಿಲ್ಲ. ಘಟನೆ ನಡೆದ ನಂತರ ಹೋಗಿ ನೋಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಈಗ ನಾನು ನೋಡಿದ ನಿಪಿ-2 ರಿಂದ 5 ಭಾವಚಿತ್ರದಲ್ಲಿ ಆ ದಿನ ಅಪಘಾತಪಡಿಸಿದ ಬಸ್ಸು ಆಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

2. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಘಟನಾ ದಿನ ಮಕ್ಕಳ ಪ್ರವಾಸ ಬಸ್ಸನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿರುವುದೇ ಅಪಘಾತಕ್ಕೆ ಕಾರಣ ಎಂದರೆ ಇರಬಹುದು.

ಪಾಟೀ ಸವಾಲು : ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ

3. ಅಪಘಾತವಾಗಿ 10 ನಿಮಿಷದ ನಂತರ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಾನು ಅಲ್ಲಿ ಹೋದಾಗ ಸ್ಥಳದಲ್ಲಿ ಸೇರಿದ ಜನರು ಸದ್ರಿ ಬಸ್ಸು ಅತೀವೇಗ ಹಾಗೂ ಅಜಾಗರೂಕತೆಯಿಂದ ಬಂದು ಢಿಕ್ಕಿಪಡಿಸಿರುತ್ತದೆ ಎಂದು ಮಾತನಾಡುತ್ತಿದ್ದರು. ನಾನು ಅಪಘಾತ ಸ್ಥಳದಿಂದ ಬಜಗೋಳಿಗೆ ಹೋಗುವಾಗ ಮಾರ್ಗದಲ್ಲಿ ಪೊಲೀಸರು ಸಿಕ್ಕಿರುತ್ತಾರೆ. ಅಲ್ಲಿಯೇ ನನ್ನ ಹೆಸರು ಮತ್ತು ವಿಳಾಸವನ್ನು ಮತ್ತು ನಾನು 10 ನಿಮಿಷದ ನಂತರ ತಕ್ಷೀರು ಸ್ಥಳಕ್ಕೆ ಹೋಗಿ ನೋಡಿದ್ದನ್ನು ಅವರಲ್ಲಿ ತಿಳಿಸಿರುತ್ತೇನೆ. ಆದಾದ ನಂತರ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ